# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಸದಸ್ಯರ ಹೆಸರು | : | ಡಾ|| ಎಂ.ಜಿ.ಮುಳೆ (ವಿಧಾನಸಭೆಯಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1603 (1141) |
| ಉತ್ತರಿಸಬೇಕಾದ ದಿನಾಂಕ | : | 13.03.2026 |

**ಕ್ರ. ಸಂ | ಪ್ರಶ್ನೆ | ಉತ್ತರ**

**ಅ**

**ಪ್ರಶ್ನೆ:** ಬೀದರ್ ಜಿಲ್ಲೆಯ ಗ್ರಾಮೀಣ ಭಾಗಗಳಲ್ಲಿ ಪ್ರಸಕ್ತ ಬೇಸಿಗೆಯಲ್ಲಿ ಕುಡಿಯುವ ನೀರಿನ ತೀವ್ರ ಅಭಾವವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಪ್ರಸ್ತುತ ಟ್ಯಾಂಕರ್ ಮೂಲಕ ನೀರು ಪೂರೈಸುತ್ತಿರುವ ಗ್ರಾಮಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ಮಾಹಿತಿ ನೀಡುವುದು)

**ಉತ್ತರ:** ಬೀದರ್ ಜಿಲ್ಲೆಯ ಕೆಲವು ಗ್ರಾಮೀಣ ಭಾಗಗಳಲ್ಲಿ ಪ್ರಸಕ್ತ ಬೇಸಿಗೆಯಲ್ಲಿ ಕುಡಿಯುವ ನೀರಿನ ಅಭಾವವಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಮುಂಬರುವ ಬೇಸಿಗೆಯಲ್ಲಿ ಕುಡಿಯುವ ನೀರಿನ ಪೂರೈಕೆಗಾಗಿ ಈ ಭಾಗದ ಅವಶ್ಯವಿರುವ ಗ್ರಾಮಗಳಿಗೆ ಟ್ಯಾಂಕರ್, ಬೋರ್ ವೆಲ್ ಹಾಗೂ ಖಾಸಗಿ ಬೋರ್ ವೆಲ್‌ಗಳನ್ನು ಬಾಡಿಗೆ ಪಡೆಯುವ ಮುಖಾಂತರ ಕುಡಿಯುವ ನೀರನ್ನು ಒದಗಿಸಲು ಹಾಗೂ ಬೋರ್‌ವೆಲ್‌ನ ಇಳುವರಿಯನ್ನು ಹೆಚ್ಚಿಸಲು Flushing/Deepening ಮಾಡಲು ಸಹ ಕ್ರಮ ಕೈಗೊಳ್ಳಲಾಗುತ್ತಿದೆ.

ಮುಂಬರುವ ಬೇಸಿಗೆಯಲ್ಲಿ ಬೀದರ್ ಜಿಲ್ಲೆಯ ಗ್ರಾಮೀಣ ಪ್ರದೇಶದ ಜನರಿಗೆ ಟ್ಯಾಂಕರ್ ಮುಖಾಂತರ ಕುಡಿಯುವ ನೀರನ್ನು ಒದಗಸಿಲು ಕೈಗೊಳ್ಳಬೇಕಾದ ತುರ್ತು ಕಾಮಗಾರಿಗಳ ವಿವರ ಈ ಕೆಳಕಂಡಂತಿದೆ.

| ಕ್ರ.ಸಂ | ತಾಲ್ಲೂಕಿನ ಹೆಸರು | ಟ್ಯಾಂಕರ್‌ಗಳ ಸಂಖ್ಯೆ | ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|---|
| 1 | 3 | 4 | 5 |
| 1 | ಔರಾದ್(ಬಿ) | 9 | 14.59 |
| 2 | ಕಮಲನಗರ | 4 | 6.06 |
| 3 | ಬಸವಕಲ್ಯಾಣ | 1 | 0.6 |
| 4 | ಹುಲಸೂರು | 0 | 0 |
| 5 | ಭಾಲ್ಕಿ | 5 | 13.5 |
| 6 | ಬೀದರ್ | 0 | 0 |
| 7 | ಹುಮನಾಬಾದ್ | 6 | 10.8 |
| 8 | ಚಿಟಗುಪ್ಪ | 7 | 12.6 |
| | ಒಟ್ಟು | 32 | 58.15 |

**ಆ**

**ಪ್ರಶ್ನೆ:** ಕಳೆದ ಮೂರು ಆರ್ಥಿಕ ವರ್ಷಗಳಲ್ಲಿ (2022–23 ರಿಂದ 2024–25ರವರೆಗೆ 'ಜಲ ಜೀವನ್ ಮಿಷನ್' (ಜೆಜೆಎಂ) ಮತ್ತು 'ಬಹುಗ್ರಾಮ ಕುಡಿಯುವ ನೀರಿನ ಯೋಜನೆ'ಗಳ (ಎಂವಿಎಸ್) ಅಡಿಯಲ್ಲಿ ಜಿಲ್ಲೆಗೆ ಬಿಡುಗಡೆಯಾದ ಒಟ್ಟು ಅನುದಾನ ಎಷ್ಟು ಮತ್ತು ಅದರಲ್ಲಿ ವೆಚ್ಚವಾದ ಮೊತ್ತವೆಷ್ಟು;

**ಉತ್ತರ:** ಕಳೆದ ಮೂರು ಆರ್ಥಿಕ ವರ್ಷಗಳಲ್ಲಿ (2022–23 ರಿಂದ 2024–25ರವರೆಗೆ 'ಜಲ ಜೀವನ್ ಮಿಷನ್' (ಜೆಜೆಎಂ) ಮತ್ತು 'ಬಹುಗ್ರಾಮ ಕುಡಿಯುವ ನೀರಿನ ಯೋಜನೆ'ಗಳ (ಎಂವಿಎಸ್) ಅಡಿಯಲ್ಲಿ ಜಿಲ್ಲೆಗೆ ಬಿಡುಗಡೆಯಾದ ಒಟ್ಟು ಅನುದಾನ ಈ ಕೆಳಕಂಡಂತಿದೆ.

| ಕ್ರ. ಸಂ | ವರ್ಷ | ಬಿಡುಗಡೆಯಾದ ಅನುದಾನ (ರೂ. ಲಕ್ಷಗಳಲ್ಲಿ) | ವೆಚ್ಚ (ರೂ. ಲಕ್ಷಗಳಲ್ಲಿ) |
|---|---|---|---|
| 1 | 2022-23 | 20241.02 | 20239.98 |
| 2 | 2023-24 | 35833.04 | 35732.01 |
| 3 | 2024-25 | 21885.22 | 21132.24 |

**ಇ**

**ಪ್ರಶ್ನೆ:** ಜಿಲ್ಲೆಯಲ್ಲಿ ಅನುಷ್ಠಾನಗೊಂಡಿರುವ ನಳಜಲ ಯೋಜನೆಗಳ ಪೈಕಿ ನೀರಿನ ಮೂಲದ ಕೊರತೆ ಅಥವಾ ತಾಂತ್ರಿಕ

**ಉತ್ತರ:** ಜಿಲ್ಲೆಯಲ್ಲಿ ಅನುಷ್ಠಾನಗೊಂಡಿರುವ ನಳಜಲ ಯೋಜನೆಗಳ ಪೈಕಿ ನೀರಿನ ಮೂಲದ ಕೊರತೆ ಅಥವಾ ತಾಂತ್ರಿಕ ದೋಷದಿಂದಾಗಿ ಸಂಪೂರ್ಣವಾಗಿ ಸ್ಥಗಿತಗೊಂಡಿರುವ ಮತ್ತು

| | | |
|---|---|---|
| | ದೋಷದಿಂದಾಗಿ ಸಂಪೂರ್ಣವಾಗಿ ಸ್ಥಗಿತಗೊಂಡಿರುವ ಮತ್ತು ಕಾರ್ಯನಿರ್ವಹಿಸದ ಯೋಜನೆಗಳ ಸಂಖ್ಯೆ ಎಷ್ಟು; ಇವುಗಳನ್ನು ಸರಿಪಡಿಸಲು ಸರ್ಕಾರ ಕೈಗೊಂಡಿರುವ ತುರ್ತು ಕ್ರಮಗಳೇನು; | ಕಾರ್ಯನಿರ್ವಹಿಸದ ಯೋಜನೆಗಳು ಯಾವುದು ಇರುವುದಿಲ್ಲ. |
| ಈ | ಹಳೆಯ ಮತ್ತು ದುರಸ್ಥಿಯಲ್ಲಿರುವ ಪೈಪ್ ಲೈನ್‌ಗಳ ಬದಲಾವಣೆ ಹಾಗೂ ಪಂಪ್ ಸೆಟ್‌ಗಳ ದುರಸ್ಥಿಗಾಗಿ ಜಿಲ್ಲೆಗೆ ವಿಶೇಷ ಪ್ಯಾಕೇಜ್ ಅಥವಾ ಹೆಚ್ಚುವರಿ ಅನುದಾನ ಮಂಜೂರು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; | ಹಳೆಯ ಮತ್ತು ದುರಸ್ಥಿಯಲ್ಲಿರುವ ಪೈಪ್‌ಲೈನ್‌ಗಳ ಬದಲಾವಣೆ ಹಾಗೂ ಪಂಪ್‌ಸೆಟ್‌ಗಳ ದುರಸ್ಥಿಗಾಗಿ ಜಿಲ್ಲೆಗೆ ವಿಶೇಷ ಪ್ಯಾಕೇಜ್ ಅಥವಾ ಹೆಚ್ಚುವರಿ ಅನುದಾನ ಮಂಜೂರು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆ. |
| ಉ | ಜಿಲ್ಲೆಯ ಅಂತರ್ಜಲ ಮಟ್ಟ ತೀವ್ರವಾಗಿ ಕುಸಿಯುತ್ತಿರುವುದನ್ನು ಗಮನಿಸಿ ನಾರಾಯಣಪುರ ಅಣೆಕಟ್ಟೆನಿಂದ ನೀರು ತರುವ ಯೋಜನೆಯ ಯಾವ ಹಂತದಲ್ಲಿದೆ ಮತ್ತು ಶಾಶ್ವತ ನೀರಿನ ಮೂಲಗಳನ್ನು ಅಭಿವೃದ್ಧಿಪಡಿಸಲು ಸರ್ಕಾರ ರೂಪಿಸಿರುವ 'ದೀರ್ಘಕಾಲಿಕ ಕ್ರಿಯಾ ಯೋಜನೆ' ಯಾವುದು? | ಜಿಲ್ಲೆಯ ಅಂತರ್ಜಲ ಮಟ್ಟ ತೀವ್ರವಾಗಿ ಕುಸಿಯುತ್ತಿರುವುದನ್ನು ಗಮನಿಸಿ ನಾರಾಯಣಪುರ ಅಣೆಕಟ್ಟೆನಿಂದ ನೀರು ತರುವ ಯೋಜನೆಯ PSR ಪರಿಶೀಲನೆ ಹಂತದಲ್ಲಿ ಇರುತ್ತದೆ ಮತ್ತು External Aided Project ಅಡಿಯಲ್ಲಿ SDP ತಾಲ್ಲೂಕುಗಳಲ್ಲಿ ಒಟ್ಟು 5 ಕೆರೆಗಳ ಪುನಃಶ್ಚೇತನ ಕಾಮಗಾರಿಗೆ ರೂ.75.00 ಲಕ್ಷಗಳು ಹಾಗೂ Non SDP ಅಡಿಯಲ್ಲಿ 8 ಕೆರೆಗಳ ಪುನಃಶ್ಚೇತನ ಕಾಮಗಾರಿಗೆ ರೂ.120.00 ಲಕ್ಷಗಳ ಕ್ರಿಯಾ ಯೋಜನೆಗೆ ಅನುಮೋದನೆ ದೊರೆತಿದ್ದು, ಕೆರೆಗಳ ಪುನಃಶ್ಚೇತನ ಕಾಮಗಾರಿ ಕೈಗೊಳ್ಳಲಾಗುವುದು. |

**ಸಂಖ್ಯೆ**:ಗ್ರಾಕುನೀ&ನೈ/ಮುಇಂ/ತಾಂ/138/2025-26

(ಪ್ರಿಯಾಂಕ್ ಖರ್ಗೆ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್
ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು
ಜೈವಿಕ ತಂತ್ರಜ್ಞಾನ ಸಚಿವರು.